**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 246/2025**

**ಸಾಕ್ಷಿಃ ಸಿಡಬ್ಲ್ಯೂಃ 3, ಪಿ.ಡಬ್ಲ್ಯೂಃ 3**

| | |
|---|---|
| ಸಾಕ್ಷಿದಾರರ ಹೆಸರು | : ಗಜಾನನ ನಾಯ್ಕ |
| ತಂದೆಯ ಹೆಸರು | : ಮಹಾಬಲೇಶ್ವರ ನಾಯ್ಕ |
| ವಯಸ್ಸು | : 35 ವರ್ಷ |
| ಉದ್ಯೋಗ | : ಪೇದೆ ,ಅಬಕಾರಿ ಕಚೇರಿ |
| ವಾಸ್ತವ್ಯ | : ಭಟ್ಕಳ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 21/06/2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ದಿಃ 12.09.2019 ರಿಂದ ಇಲ್ಲಿಯವರೆಗೆ ಅಬಕಾರಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ.

2. ದಿ. 24.04.2024 ರಂದು ಸಾರ್ವತ್ರಿಕ ಲೋಕಾಸಭೆ ಚುನಾವಣೆ ನೀತಿಸಂಹಿತೆ ಜಾರಿಯಲ್ಲಿರುವುದರಿಂದ ಅಬಕಾರಿ ಅಕ್ರಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರಕಾರಿ ವಾಹನ ಸಂಖ್ಯೆಃ ಕೆ ಎ.47.ಜಿ.0042 ದಲ್ಲಿ ಚಾಸಾ 1 , 2 ಮತ್ತು ನಾನು ಸಂಸುದ್ದೀನ್ ಸರ್ಕಲದಿಂದ ಸಾಗರ ರಸ್ತೆಯ ಗುಳ್ಮಿ ಕ್ರಾಸ್ ನಲ್ಲಿ ರಾತ್ರಿ 11.00 ಗಂಟೆಗೆ ಗಸ್ತು ಕರ್ತವ್ಯದಲ್ಲಿ ಇದ್ದಾಗ ಗುಳ್ಮಿ ಕಡೆಯಿಂದ ಒಬ್ಬ ವ್ಯಕ್ತಿ ದ್ವಿಚಕ್ರ ವಾಹನ ಚಲಾಯಿಸಿಕೊಂಡು ಬರುತ್ತಿದ್ದಾಗ ವಾಹನದ ಕಾಲಿಡುವ ಜಾಗದಲ್ಲಿ 1 ಚೀಲ ಇದ್ದುದು ಕಂಡುಬಂದಿದ್ದು ಅನುಮಾಸ್ಪದವಾಗಿ ಚಾಸಾ 1 ಇವರು ಸದರಿ ವ್ಯಕ್ತಿಗೆ ನಿಲ್ಲುವಂತೆ ಸೂಚಿಸಿದಾಗ ಆತನು ತನ್ನ ಗಾಡಿಯನ್ನು ನಿಲ್ಲಿಸಿದ್ದು ಇರುತ್ತದೆ. ನಂತರ ನಾವು ಸದರಿ ವಾಹನವನ್ನು ಸುತ್ತುವರಿದು ಆತನಿಗೆ ಹೆಸರು ಕೇಳಿದಾಗ ಆತ ರಾಮಕೃಷ್ಣ ನಾಗಪ್ಪ ನಾಯ್ಕ ಎಂದು ಹೇಳಿದ್ದು ಇರುತ್ತದೆ. ಚೀಲದಲ್ಲಿ ಏನು ಇದೆ ಎಂದು ಕೇಳಿದಾಗ ಆತ ಗಡಿಬಿಡಿಯಿಂದ ಮದ್ಯವಿದೆ ಎಂದು ತಿಳಿಸಿರುತ್ತಾನೆ. ಚಾಸಾ 1 ಇವರು ಶೋಧನಾ ಸಮುಚಿತ್ವ ಆಧಾರವನ್ನು ತಯಾರಿಸಿ ಪಂಚರಿಗೆ ಕಾಯಲಾಗಿ ರಾತ್ರಿ ಆದ ಕಾರಣ ಯಾರೂ ಪಂಚರು ದೊರಕದ ಕಾರಣ ನಮ್ಮನ್ನೇ ಪಂಚರಾಗಿ ಮಾಡಿ ವಾಹನ ಪರಿಶೀಲನೆ ಮಾಡಿದಾಗ ಅದು ಗೋಲ್ಡನ್ ಬಣ್ಣದ ಟಿ ವಿ ಎಸ್ ಜ್ಯೂಪಿಟರ್ ಕಂಪನಿಯ ಗಾಡಿಯಾಗಿದ್ದು ಅದರ ನೊಂದಣಿ ಸಂಖ್ಯೆಃ ಕೆಎ 47 ಯು 2019 ಆಗಿರುತ್ತದೆ. ಶೋಧನೆ ಮುಂದುವರೆಸಿದಾಗ ವಿವಿಧ ಬಣ್ಣದ ವಿಮಲ ಪಾನ್ ಮಸಾಲದ ಬಟ್ಟೆ ಚೀಲ ಇದ್ದು ಅದನ್ನು ತೆರೆಯಲಾಗಿ ವಿವಿಧ ಬ್ರಾಂಡ್ ನ ಮದ್ಯದ ಟೆಟ್ರಾ ಪ್ಯಾಕ್ ಇದ್ದುದು ಕಂಡುಬಂದಿದ್ದು ಅದರಲ್ಲಿ 90 ಎಮ್ ಎಲ್ ನ ಒಲ್ಡ ಟಾವರಿನ್ ವಿಸ್ಕಿಯ 20 ಟೆಟ್ರಾ ಪ್ಯಾಕುಗಳು , 90 ಎಮ್ ಎಲ್ ನ ಹೈವರ್ಡ ಚಿಯ್ರ್ಸ ವಿಸ್ಕಿಯ 48

ಟೆಟ್ರಾ ಪ್ಯಾಕುಗಳು , 90 ಎಮ್ ಎಲ್ ನ ಒರಿಜಿನಲ ಚಾಯ್ಸು ವಿಸ್ಕಿಯ 48 ಟೆಟ್ರಾ ಪ್ಯಾಕುಗಳು ಕಂಡುಬಂದಿದ್ದು ಅದನ್ನು ತೆಗೆದುಕೊಂಡು ಹೋಗಲು ಪರವಾನಿಗೆ ಇದೆ ಎಂದು ಆರೋಪಿಗೆ ಕೇಳಿದಾಗ ಆತ ಇಲ್ಲವೆಂದು ಉತ್ತರಿಸಿದ್ದು , ಆಗ ಚಾಸಾ 1 ಇವರು ಇದು ಅಕ್ರಮ ಮದ್ಯ ಎಂದು ಪರಿಶೀಲನೆ ಮಾಡಿ ವಾಹನದ ಡಿಕ್ಕಿ ತೆರೆದಾಗ ಅಲ್ಲಿ ಯಾವುದೇ ವಸ್ತು ದೊರಕಿದು್ದ ಇರುವುದಿಲ್ಲ. ವಾಹನದ ಇಂಜೀನ್ ಹಾಗೂ ಚೆಸ್ ನಂಬರನ್ನು ಪಂಚನಾಮೆಯಲ್ಲಿ ನಮೂದಿಸಿ ಒಟ್ಟು 10.44 ಲೀ ಮದ್ಯ ಪತ್ತೆಯಾಗಿದ್ದು ಒಟ್ಟು 116 ಟೆಟ್ರಾ ಪ್ಯಾಕುಗಳು ಇದ್ದು , ಭದ್ರತಾ ಚೀಟಿ ಲೇಬಲ್ ಹರಿದಿದ್ದು ಕಂಡುಬಂದಿರುತ್ತದೆ. ಅದರ ಒಟ್ಟು ಮೌಲ್ಯ ರೂ. 5064 ಇದೆ. ಪತ್ತೆಯಾದ ಸ್ವತ್ತನ್ನು ಜಪ್ತು ಮಾಡಿ ಅದರಲ್ಲಿ 90 ಎಮ್ ಎಲ್ ನ ಒಟಿ ವಿಸ್ಕಿಯ 10 ಟೆಟ್ರಾ ಪ್ಯಾಕ್ ಗಳನ್ನು , 90 ಎಮ್ ಎಲ್ ನ ಹೈವರ್ಡ್ಸ್ ಚಿಯರ್ಸ ವಿಸ್ಕಿಯ 10 ಟೆಟ್ರಾ ಪ್ಯಾಕ್ ಗಳನ್ನು , 90 ಎಮ್ ಎಲ್ ನ ಒರಿಜಿನಲ್ ಚಾಯ್ಸು ವಿಸ್ಕಿಯ 10 ಟೆಟ್ರಾ ಪ್ಯಾಕ್ ಗಳನ್ನು ಒಟ್ಟು 30 ಟೆಟ್ರಾ ಪ್ಯಾಕುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾಧರಿಗಾಗಿ ತೆಗೆದು, ಬಿಳಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ ಅರಗು ಹಚ್ಚಿ ಇಲಾಖೆಯ ಮೊಹರು ಹಾಕಲಾಗಿತ್ತು. ಮಾಧರಿ ಮೊಹರುಹಾಗೂ ಸ್ವತ್ತುಪಟ್ಟಿ ಸ್ಥಳದಲ್ಲಿ ತಯಾರಿಸಲಾಯಿತು. ಮಾಧರಿ ಚೀಟಿಯಲ್ಲಿ ನಮ್ಮ ಸಹಿ ಪಡೆದು ಅಂಟಿಸಲಾಯಿತು. ಕೃತ್ಯ ನಡೆದ ಸ್ಥಳದ ಉತ್ತರಕ್ಕೆ ಸಾಗರ ಭಟ್ಕಳ ರಸ್ತೆ , ದಕ್ಷಿಣಕ್ಕೆ ಗುಳ್ಮೆ ಕಡೆಗೆ ಹೋಗುವ ರಸ್ತೆ , ಪೂರ್ವಕ್ಕೆ ಹಾಗೂ ಪಶ್ಚಿಮಕ್ಕೆ ಅರಣ್ಯ ಪ್ರದೇಶ ಇದೆ. ಪಂಚನಾಮೆಯನ್ನು ರಾತ್ರಿ 11.15 ರಿಂದ ಬೆಳಿಗ್ಗೆ 12.30 ವರೆಗೆ ಟಾರ್ಚ ಹಾಗೂ ಜೀಪಿನ ಬೆಳಕಿನಿಂದ ಬರೆಯಲಾಯಿತು. ಆರೋಪಿಗೆ ನೊಟೀಸು ನೀಡಲಾಯಿತು.

3. ಸಾಕ್ಷಿಯು ಮುದ್ದೆ ಮಾಲು 1 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–3 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–6 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–6 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆಂದು ನುಡಿದಿರುತ್ತಾರೆ.

**ಪಾಟೀ ಸವಾಲು ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ.**

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ 246/2025**

**ಸಾಕ್ಷಿಃ ಸಿಡಬ್ಲ್ಯೂಃ 2, ಪಿ.ಡಬ್ಲ್ಯೂಃ 2**

ಸಾಕ್ಷಿದಾರನ ಹೆಸರು : ಪ್ರದೀಪ

ತಂದೆಯ ಹೆಸರು : ಮಾರುತಿ ಮೇತ್ರಿ

ವಯಸ್ಸು : 34 ವರ್ಷ

ಉದ್ಯೋಗ : ಪೇದೆ ,ಅಬಕಾರಿ ಕಚೇರಿ

ವಾಸ್ತವ್ಯ : ಭಟ್ಕಳ

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 21/06/2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ದಿಃ 29.04.2021 ರಿಂದ ಇಲ್ಲಿಯವರೆಗೆ ಅಬಕಾರಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ.

2. ದಿ. 24.04.2024 ರಂದು ಸಾರ್ವತ್ರಿಕ ಲೋಕಾಸಭೆ ಚುನಾವಣೆ ನೀತಿಸಂಹಿತೆ ಜಾರಿಯಲ್ಲಿರುವುದರಿಂದ ಅಬಕಾರಿ ಅಕ್ರಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರಕಾರಿ ವಾಹನ ಸಂಖ್ಯೆ ಕೆಎ.47.ಜಿ.0042 ದಲ್ಲಿ ಚಾಸಾ 1 , 3 ಮತ್ತು ನಾನು ಸಂಸುದ್ದೀನ್ ಸರ್ಕಲದಿಂದ ಸಾಗರ ರಸ್ತೆಯ ಗುಳ್ಮಿ ಕ್ರಾಸ್ ನಲ್ಲಿ ರಾತ್ರಿ 11.00 ಗಂಟೆಗೆ ಗಸ್ತು ಕರ್ತವ್ಯದಲ್ಲಿ ಇದ್ದಾಗ ಗುಳ್ಮಿ ಕಡೆಯಿಂದ ಒಬ್ಬ ವ್ಯಕ್ತಿ ದ್ವಿಚಕ್ರ ವಾಹನ ಚಲಾಯಿಸಿಕೊಂಡು ಬರುತ್ತಿದ್ದಾಗ ವಾಹನದ ಕಾಲಿಡುವ ಜಾಗದಲ್ಲಿ 1 ಚೀಲ ಇದ್ದುದು ಕಂಡುಬಂದಿದ್ದು ಅನುಮಾಸ್ಪದವಾಗಿ ಚಾಸಾ 1 ಇವರು ಸದರಿ ವ್ಯಕ್ತಿಗೆ ನಿಲ್ಲುವಂತೆ ಸೂಚಿಸಿದಾಗ ಆತನು ತನ್ನ ಗಾಡಿಯನ್ನು ನಿಲ್ಲಿಸಿದ್ದು ಇರುತ್ತದೆ. ನಂತರ ನಾವು ಸದರಿ ವಾಹನವನ್ನು ಸುತ್ತು ವರಿದು ಆತನಿಗೆ ಹೆಸರು ಕೇಳಿದಾಗ ಆತ ರಾಮಕೃಷ್ಣ ನಾಗಪ್ಪ ನಾಯ್ಕ ಎಂದು ಹೇಳಿದ್ದು ಇರುತ್ತದೆ. ಚೀಲದಲ್ಲಿ ಏನು ಇದೆ ಎಂದು ಕೇಳಿದಾಗ ಆತ ಗಡಿಬಿಡಿಯಿಂದ ಮದ್ಯವಿದೆ ಎಂದು ತಿಳಿಸಿರುತ್ತಾನೆ. ಚಾಸಾ 1 ಇವರು ಶೋಧನಾ ಸಮುಚ್ಚಿತ್ವ ಆಧಾರವನ್ನು ತಯಾರಿಸಿ ಪಂಚರಿಗೆ ಕಾಯಲಾಗಿ ರಾತ್ರಿ ಆದ ಕಾರಣ ಯಾರೂ ಪಂಚರು ದೊರಕದ ಕಾರಣ ನಮ್ಮನ್ನೇ ಪಂಚರಾಗಿ ಮಾಡಿ ವಾಹನ ಪರಿಶೀಲನೆ ಮಾಡಿದಾಗ ಅದು ಗೋಲ್ಡನ್ ಬಣ್ಣದ ಟಿ ವಿ ಎಸ್ ಜ್ಯೂಪಿಟರ್ ಕಂಪನಿಯ ಗಾಡಿಯಾಗಿದ್ದು ಅದರ ನೊಂದಣಿ ಸಂಖ್ಯೆ ಕೆಎ 47 ಯು 2019 ಆಗಿರುತ್ತದೆ. ಶೋಧನೆ ಮುಂದುವರೆಸಿದಾಗ ವಿವಿಧ ಬಣ್ಣದ ವಿಮಲ ಪಾನ್ ಮಸಾಲದ ಬಟ್ಟೆ ಚೀಲ ಇದ್ದು ಅದನ್ನು ತೆರೆಯಲಾಗಿ ವಿವಿಧ ಬ್ರಾಂಡ್ ನ ಮದ್ಯದ ಟೆಟ್ರಾ ಪ್ಯಾಕ್ ಇದ್ದುದು ಕಂಡುಬಂದಿದ್ದು ಅದರಲ್ಲಿ 90 ಎಮ್ ಎಲ್ ನ ಒಲ್ಡ ಟಾವರಿನ್ ವಿಸ್ಕಿಯ 20 ಟೆಟ್ರಾ ಪ್ಯಾಕುಗಳು , 90 ಎಮ್ ಎಲ್ ನ ಹೈವರ್ಡ ಚಿಯ್ರ್ಸ್ ವಿಸ್ಕಿಯ 48

ಟೆಟ್ರಾ ಪ್ಯಾಕುಗಳು , 90 ಎಮ್ ಎಲ್ ನ ಒರಿಜಿನಲ ಚಾಯ್ಸು ವಿಸ್ಕಿಯ 48 ಟೆಟ್ರಾ ಪ್ಯಾಕುಗಳು ಕಂಡುಬಂದಿದ್ದು ಅದನ್ನು ತೆಗೆದುಕೊಂಡು ಹೋಗಲು ಪರವಾನಿಗೆ ಇದೆ ಎಂದು ಆರೋಪಿಗೆ ಕೇಳಿದಾಗ ಆತ ಇಲ್ಲವೆಂದು ಉತ್ತರಿಸಿದ್ದು , ಆಗ ಚಾಸಾ 1 ಇವರು ಇದು ಅಕ್ರಮ ಮದ್ಯ ಎಂದು ಪರಿಶೀಲನೆ ಮಾಡಿ ವಾಹನದ ಡಿಕ್ಕಿ ತೆರೆದಾಗ ಅಲ್ಲಿ ಯಾವುದೇ ವಸ್ತು ದೊರಕಿದು್ದ ಇರುವುದಿಲ್ಲ. ವಾಹನದ ಇಂಜೀನ್ ಹಾಗೂ ಚೆಸ್ ನಂಬರನ್ನು ಪಂಚನಾಮೆಯಲ್ಲಿ ನಮೂದಿಸಿ ಒಟ್ಟು 10.4 ಲೀ ಮದ್ಯ ಪತ್ತೆಯಾಗಿದ್ದು ಒಟ್ಟು 116 ಟೆಟ್ರಾ ಪ್ಯಾಕುಗಳು ಇದ್ದು , ಭದ್ರತಾ ಚೀಟಿ ಲೇಬಲ್ ಹರಿದಿದ್ದು ಕಂಡುಬಂದಿರುತ್ತದೆ. ಅದರ ಒಟ್ಟು ಮೌಲ್ಯ ರೂ. 5064 ಇದೆ. ಪತ್ತೆಯಾದ ಸ್ವತ್ತನ್ನು ಜಪ್ತು ಮಾಡಿ ಅದರಲ್ಲಿ 90 ಎಮ್ ಎಲ್ ನ ಒಟಿ ವಿಸ್ಕಿಯ 10 ಟೆಟ್ರಾ ಪ್ಯಾಕ್ ಗಳನ್ನು , 90 ಎಮ್ ಎಲ್ ನ ಹೈವರ್ಡ್ಚಿಯರ್ಸ ವಿಸ್ಕಿಯ 10 ಟೆಟ್ರಾ ಪ್ಯಾಕ್ ಗಳನ್ನು , 90 ಎಮ್ ಎಲ್ ನ ಒರಿಜಿನಲ್ ಚಾಯ್ಸು ವಿಸ್ಕಿಯ 10 ಟೆಟ್ರಾ ಪ್ಯಾಕ್ ಗಳನ್ನು ಒಟ್ಟು 30 ಟೆಟ್ರಾ ಪ್ಯಾಕುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾಧರಿಗಾಗಿ ತೆಗೆದು, ಬಿಳಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ ಅರಗು ಹಚ್ಚಿ ಇಲಾಖೆಯ ಮೊಹರು ಹಾಕಲಾಗಿತ್ತು. ಮಾಧರಿ ಮೊಹರುಹಾಗೂ ಸ್ವತ್ತುಪಟ್ಟಿ ಸ್ಥಳದಲ್ಲಿ ತಯಾರಿಸಲಾಯಿತು. ಮಾಧರಿ ಚೀಟಿಯಲ್ಲಿ ನಮ್ಮ ಸಹಿ ಪಡೆದು ಅಂಟಿಸಲಾಯಿತು. ಕೃತ್ಯ ನಡೆದ ಸ್ಥಳದ ಉತ್ತರಕ್ಕೆ ಸಾಗರ ಭಟ್ಕಳ ರಸ್ತೆ , ದಕ್ಷಿಣಕ್ಕೆ ಗುಳ್ಮೆ ಕಡೆಗೆ ಹೋಗುವ ರಸ್ತೆ , ಪೂರ್ವಕ್ಕೆ ಹಾಗೂ ಪಶ್ಚಿಮಕ್ಕೆ ಅರಣ್ಯ ಪ್ರದೇಶ ಇದೆ. ಕೃತ್ಯ ನಡೆದ ಪೊಟೋವನ್ನು ನನ್ನ ಮೊಬೈಲ್ ವಿವೋ ವೈ 35 ನಿಂದ ತೆಗೆದಿರುತ್ತೇನೆ. ಆ ಬಗ್ಗೆ ನಾನು ಕಲಂ 65 ಬಿ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಪಂಚನಾಮೆಯನ್ನು ರಾತ್ರಿ 11.15 ರಿಂದ ಬೆಳಿಗ್ಗೆ 12.30 ವರೆಗೆ ಟಾರ್ಚ ಹಾಗೂ ಜೀಪಿನ ಬೆಳಕಿನಿಂದ ಬರೆಯಲಾಯಿತು. ಆರೋಪಿಗೆ ನೊಟೀಸು ನೀಡಲಾಯಿತು. ದಿಃ 08.05.2024 ರಂದು ರಾಸಾಯನಿಕ ಪರೀಕ್ಷೆಗೆ ತೆಗೆದ ಮುದ್ದೆಮಾಲುಗಳನ್ನು ಭಟ್ಕಳದಿಂದ ಸಹಾಯಕ ರಾಸಾಯನಿಕ ಪರೀಕ್ಷಕರು, ಧಾರವಾಡಕ್ಕೆ ಹೋಗಿ ಕೊಟ್ಟು ಬಂದಿರುತ್ತೇನೆ. ನಂತರ ದಿ.15.05.2024 ರಂದು ಧಾರವಾಡಕ್ಕೆ ಹೋಗಿ ಪಡೆದುಕೊಂಡು ಬಂದಿರುತ್ತೇನೆ.

3. ಸಾಕ್ಷಿಯು ಮುದ್ದೆ ಮಾಲು 1 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–3 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಬಿ ಎಂದು ಗುರುತಿಸಲಾಯಿತು. ಸಹಾಯಕ ರಾಸಾಯನಿಕ ಪ್ರಯೋಗಾಲಯ, ಧಾರವಾಡ ಇವರಿಗೆ ಬರೆದ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ– 8 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 8 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–6 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–6 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಕಲಂ 65 ಬಿ ಪ್ರಮಾಣಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ– 9 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 9 ಎ ಎಂದು

ಗುರುತಿಸಲಾಯಿತು. ಸಾಕ್ಷಿಯು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆಂದು ನುಡಿದಿರುತ್ತಾರೆ.

**ಪಾಟೀ ಸವಾಲು ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ.**